

# ಮೂರನೇ ಸಲ..

'ಮಠ' ಮತ್ತು 'ಎದ್ದೇಳು ಮಂಜುನಾಥಾ' ಚಿತ್ರಗಳ ಯಶಸ್ವೀ ಜೋಡಿ ಗುರುಪ್ರಸಾದ್–ಜಗ್ಗೇಶ್ ಮತ್ತೆ ಒಂದುಗೂಡುವ ಲಕ್ಷಣಗಳು ಕಾಣಿಸುತ್ತಿವೆ. ಇಬ್ಬರು ಮಾತುಗಾರರಿಗೂ ಮಾತಿಗಿಂತಲೂ ಕೃತಿ ಮುಖ್ಯ ಎನ್ನುವುದು ಅರ್ಥವಾದಂತಿದೆ.

■ ಪದ್ಮನಾಭ ಭಟ್

'ಎರಡನೇ ಸಲ' ಸಿನಿಮಾದಲ್ಲಿ ನಿರ್ಮಾಪಕರೊಂದಿಗೆ ನಡೆಸಿದ ಜಟಾಪಟಿಯ ನಂತರ ನಿರ್ದೇಶಕ ಗುರುಪ್ರಸಾದ್ ಮಾಧ್ಯಮಕ್ಕೆ ಎದುರಾಗಿದ್ದೇ ತುಂಬ ಅಪರೂಪ. ಹಾಗೆ ಅತಿ ಅಪರೂಪವಾಗಿ ಪತ್ರಕರ್ತರಿಗೆ ಮುಖ ತೋರಿಸಿದಾಗಲೆಲ್ಲ ಒಂದೊಂದು ಹೊಸ ಸುದ್ದಿ ಕೊಡುತ್ತಲೇ ಇದ್ದಾರೆ.

ಇತ್ತೀಚೆಗೆ ಗುರು ಮತ್ತೆ ಮಾಧ್ಯಮದೆದುರು ಬಂದಿದ್ದರು. ತಾವು ಅಭಿನಯಿಸಿದ ಚಿತ್ರವೊಂದರ ಪತ್ರಿಕಾಗೋಷ್ಠಿಗೆ ಬಂದಿದ್ದ ಅವರು 'ಮೀ ಟೂ' ಅಭಿಯಾನದ ಭಾಗವಾದ ಕನ್ನಡದ ಇಬ್ಬರು ನಟಿಯರ ವಿರುದ್ಧ ವಾಕ್ಪ್ರವಾಹ ಮಾಡಿದ್ದು ದೊಡ್ಡ ಸುದ್ದಿಯಾಗಿತ್ತು. ಆ ಗದ್ದಲದಲ್ಲಿ ಅವರು ಹೇಳಿದ ಇನ್ನಷ್ಟು ಸುದ್ದಿಗಳು ಸದ್ದಿಲ್ಲದೆಯೇ ಹೋದವು.

ಆ ಸುದ್ದಿ ಏನೆಂದರೆ ಜಗ್ಗೇಶ್ ಮತ್ತು ಗುರುಪ್ರಸಾದ್ ಜೋಡಿ ಮತ್ತೆ ಒಂದಾಗುತ್ತಿದೆ. 'ನಾವಿಬ್ಬರೂ ಒಟ್ಟಿಗೆ ಸಿನಿಮಾ ಮಾಡ್ತಿದ್ದೀವಿ' ಅಂತ ಜಗ್ಗೇಶ್ ಈಗಾಗಲೇ ಹೇಳಿದ್ದರು. ಈಗ ಗುರು ಕೂಡ ಅದನ್ನು ಖಚಿತಪಡಿಸಿದ್ದಾರೆ. 'ಆವಾಗ ಅಷ್ಟೆಲ್ಲ ಕಿತ್ತಾಡ್ಕೊಂಡಿದ್ದ ನೀವು ಈಗ ಒಂದಾಗಿದ್ದು ಹೇಗೆ?' ಎಂದು ಕೇಳಿದರೆ ಕೂಲಾಗೇ ಗಡ್ಡ ನೀವಿಕೊಳ್ಳುತ್ತ ಉತ್ತರಿಸುತ್ತಾರೆ ಗುರು.

'ಒಬ್ಬ ಕಲಾವಿದನಾಗಿ ಜಗ್ಗೇಶ್ ಅವರನ್ನು ನಾನು ಯಾವಾಗಲೂ ಗೌರವಿಸುತ್ತೇನೆ. ಅವರನ್ನು ಅಣ್ಣ ಎಂದೇ ಕರೆಯುತ್ತೇನೆ. ನಮ್ಮಲ್ಲಿ ಭಿನ್ನಾಭಿಪ್ರಾಯ ಇದ್ದಿದ್ದು ಡಬ್ಬಿಂಗ್ ವಿಷಯಕ್ಕೆ ಸಂಬಂಧಿಸಿದಂತೆ. ಆದ್ರೆ ಈಗ ನಾನೇ ಸರಿ ಅಂತ ತೀರ್ಮಾನ ಆಯ್ತುಲ್ವಾ? ಡಬ್ಬಿಂಗ್ ಕನ್ನಡಕ್ಕೆ ಬಂದಾಯ್ತುಲ್ವಾ? ನಾನಾಗಲೇ ಹೇಳಿದ್ದೆ – ಹೀಗೆಲ್ಲ ನಾಲ್ಕು ಜನ ಹೋಗಿ ಡಬ್ಬಿಂಗ್ ವಿರುದ್ಧ ಗಲಾಟೆ ಮಾಡ್ಬಾರ್ದು. ಅದು ಕಾನೂನಿಗೆ ವಿರುದ್ಧ ಆಗತ್ತೆ ಅಂತ. ಈಗ ಕೋರ್ಟು ಕೂಡ ಅದನ್ನೇ ಹೇಳಿದೆ' ಎಂದು ತಮ್ಮ ಗೆಲುವಿನ ಲಾಂಛನ ಒತ್ತುತ್ತಾರೆ ಅವರು. 'ಮಠ', 'ಎದ್ದೇಳು ಮಂಜುನಾಥಾ'ದಂಥ ಸಿನಿಮಾಗಳನ್ನು ಕೊಟ್ಟ ಈ ಜೋಡಿಯ ಮೂರನೇ ಚಿತ್ರ ಹೇಗಿರಬಹುದು ಎಂಬ ಕುತೂಹಲವಂತೂ ಗಾಂಧಿನಗರದಲ್ಲಿ ಹುಟ್ಟಿಕೊಂಡಿರುವುದು ನಿಜ.

ಮತ್ತೊಂದು ವಿಷಯ ಏನೆಂದರೆ ಪರೋಕ್ಷವಾಗಿ ಸ್ವತಃ ಮೀ ಟೂ ಆರೋಪಕ್ಕೆ ಗುರಿಯಾಗಿರುವ ಇವರಿಗೆ 'ಮೀ ಟೂ' ಆಂದೋಲನ ಆಧರಿಸಿ ಸಿನಿಮಾ ಮಾಡುವ ಆಲೋಚನೆಯೂ ಇದೆಯಂತೆ! ಹಾಗಾದರೆ ಗುರು ಮತ್ತು ಜಗ್ಗೇಶ್ ಕಾಂಬಿನೇಷನ್‌ನಲ್ಲಿ ಬರುವ ಸಿನಿಮಾ ಇದೇ ಇರಬಹುದಾ ಎಂದು ಹುಬ್ಬೇರಿಸಬೇಡಿ. ಖಂಡಿತ ಅಲ್ಲ. ಯಾಕೆಂದರೆ 'ಈ ಚಿತ್ರಕ್ಕೆ ನನ್ನ ಎದುರಿಗಿರುವ ಆಯ್ಕೆ ಎರಡೇ. ಒಂದು ಅರ್ಜುನ್ ಸರ್ಜಾ ಮತ್ತು ಶ್ರುತಿ ಹರಿಹರನ್ ಅಥವಾ ಗುರುಪ್ರಸಾದ್ ಮತ್ತು ಸಂಗೀತಾ ಭಟ್' ಎಂದು ಹೇಳಿ ಸಪೂರ ಸಿಗರೇಟು ಬಾಯಿಗಿಟ್ಟುಕೊಂಡು ನಡುಗಿಸುತ್ತಾರೆ ಅವರು. ■